ಅಸಲು ದಾವಾ ನಂಃ 30/2025
ಪಿ ಡಬ್ಲ್ಯೂಃ 01

<u>ದಿನಾಂಕಃ 20-07-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>
<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ H.A.S ವಕೀಲರಿಂದಃ</u>

1. ನಾನು P.U.C. ವರೆಗೆ ವ್ಯಾಸಾಂಗ ಮಾಡಿರುತ್ತೇನೆ. ನಾನು 1 ರಿಂದ 7 ನೇ ತರಗತಿಯವರೆಗೆ ಸೆಂಟ್ ಜಾರ್ಜ್ ಪ್ರಾಥಮಿಕ ಶಾಲೆ ಎನ್.ಆರ್.ಪುರದಲ್ಲಿ 2001 ರಿಂದ 2007 ರವರೆಗೆ ಓದಿರುತ್ತೇನೆ ಎಂದರೆ ಸರಿ. ನಾನು ಹೈಸ್ಕೂಲ್ ವಿದ್ಯಾಭ್ಯಾಸವನ್ನು ದೀಪ್ತಿ ಶಾಲೆ ಎನ್ ಆರ್ ಪುರದಲ್ಲಿ ಮುಗಿಸಿರುತ್ತೇನೆ ಎಂದರೆ ಸರಿ. ಮೂಲ ದಾವೆ ಸಂಖ್ಯೆಃ 22/2025 ರ ಪ್ರತಿವಾದಿಯವರ ಮಗ ಸೈಯದ್ ಶಾರುಕ್ ಇವರು 1 ರಿಂದ 7 ನೇ ತರಗತಿಯ ವರೆಗೆ ನನ್ನ ಸಹಪಾಟಿ ಇರುತ್ತಾರೆ ಎಂದರೆ ಸಾಕ್ಷಿ ಇರಬಹುದು ಆದರೆ ಅವರ ಪರಿಚಯ ನನಗೆ ಇರುವುದಿಲ್ಲ. ಪ್ರತಿವಾದಿಯ ಮನೆ ಎಲ್ಲಿ ಇರುತ್ತದೆ ಎಂದು ನನಗೆ ಈಗ ಗೊತ್ತಿರುತ್ತದೆ. ಸಾಕ್ಷಿ ಮುಂದುವರೆದು ನಮ್ಮ ಜಾಗಾದಲ್ಲಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಈ ದಾವೆ ಹೂಡಲು ಸರ್ವೆ ಮತ್ತು ರೆವಿನ್ಯೂ ಇಲಾಖೆಯಲ್ಲಿ ದಾಖಲೆಗಳನ್ನು ನಾನೇ ಪಡೆದುಕೊಂಡಿರುತ್ತೇನೆ. ನಮ್ಮ ಆಸ್ತಿಗೆ ಸಂಬಂಧ ಪಟ್ಟ ಮೂಲ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ.
2. ಸರ್ವೆ ನಂ. 112 ಮೂಲತಃ ನಮ್ಮ ತಾತನಾದ Y.C. ನಿರ್ವಣಪ್ಪ ಇವರಿಗೆ ಸಂಬಂಧಿಸಿದ್ದು ಇರುತ್ತದೆ. ನಮ್ಮ ತಾತನಿಗೆ ಈ ಆಸ್ತಿ ಸೇರಿದ ಬಗ್ಗೆ ಮೂಲ ಪತ್ರ, Record of Rights ನೋಡಿರುತ್ತೇನೆ. ಸರ್ವೆ ನಂ. 112 ನಮ್ಮ ತಾತನಿಗೆ ವಿಭಾಗ ಪತ್ರದ ಮೂಲಕ ಬಂದಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಒಂದು Record of Rights Index of Land ನ ಪ್ರತಿ ತೋರಿಸಲಾಗಿ ಸರ್ವೆ ನಂ. 112 ನಮ್ಮ ತಾತನಿಗೆ ವಿಭಾಗ ಮುಖಾಂತರ ಬಂದಿರುತ್ತದೆ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಯನ್ನು ಒಪ್ಪಿದ್ದು, ಅದನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ-**1** ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಗೆ ಸರ್ವೆ ನಂ. 112 ರ Record of Rights ನ ಪ್ರತಿ ತೋರಿಸಲಾಗಿ ಸಾಕ್ಷಿ ಒಪ್ಪಿಕೊಂಡಿದ್ದು, ಅದನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ-**2** ಎಂದು ಗುರುತಿಸಲಾಗಿರುತ್ತದೆ.
3. ಸರ್ವೆ ನಂ. 112 ಯಾವಾಗ ಹಿಸ್ಸಾ ಪೋಡಿ ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ 2018-19 ರಲ್ಲಿ ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಸರ್ವೆ ನಂ. 112 ಕ್ಕೆ

ಸಂಬಂಧಪಟ್ಟಂತೆ ಮೂಲ ಟಿಪ್ಪಣಿ ಪುಸ್ತಕವನ್ನು ನಾನು ನೋಡಿರುವುದಿಲ್ಲ. ನಿಪಿ-7 ರ ದೃಢಿಕೃತ ಪ್ರತಿಯನ್ನು ನಾನೇ ಪಡೆದುಕೊಂಡಿರುತ್ತೇನೆ. ಸಾಕ್ಷಿಗೆ ಇಳುವಳ್ಳಿ ಗ್ರಾಮದ ಸರ್ವೆ ನಂ. 112 ರ ರೀ-ಸರ್ವೆ ಟಿಪ್ಪಣಿ ಪುಸ್ತಕ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿನಿಶಾನೆ ಡಿ**-3** ಎಂದು ಗುರುತಿಸಲಾಗಿರುತ್ತದೆ. ದಾವಾ ಸ್ವತ್ತು "A" ಕೃಷಿ ಜಮೀನು ಇದ್ದು, ಅದನ್ನು ಭತ್ತ ಮತ್ತು ಅಡಿಕೆ ಬೆಳೆದಿದ್ದು ಹಾಗೂ ಸ್ವಲ್ಪ ಜಾಗಾ ಖಾಲಿ ಇರುತ್ತದೆ. ನಾನು ಹತ್ತು ಮತ್ತು ಹನ್ನೊಂದನೆ ತರಗತಿ ವಿದ್ಯಾಭ್ಯಾಸ ಮಾಡುವವರೆಗೂ ಸದರಿ ಪೂರ್ತಿ ಆಸ್ತಿಯಲ್ಲಿ ಭತ್ತ ಬೆಳೆಯುತ್ತಿದ್ದರು. 2011 ರ ನಂತರ ಸದರಿ ಜಮೀನಿನಲ್ಲಿ ಅಡಿಕೆ ಬೆಳೆ ಬೆಳೆಯುತ್ತಾ ಬಂದಿರುತ್ತೇವೆ. ಸದರಿ ಜಮೀನಿನಲ್ಲಿ ಸ್ವಲ್ಪ ಫಸಲು ಇರುವ ಅಡಿಕೆ ತೋಟ, ಖಾಲಿ ಜಾಗಾ ಮತ್ತು ಒತ್ತುವರಿ ಆಗಿರುವ ಜಾಗಾ ಇರುತ್ತದೆ.

**4.** ದಾವಾ ಸ್ವತ್ತು "A" ನಲ್ಲಿ ಖರಾಬು ಜಾಗಾ ಇರುವ ಬಗ್ಗೆ ನಾನು ಗಮನಿಸಿರುವುದಿಲ್ಲ. ಸರ್ವೆ ದಾಖಲೆಯ ಪ್ರಕಾರ ದಾವಾ ಸ್ವತ್ತು "A" ರಲ್ಲಿ 5 ಗುಂಟೆ ಖರಾಬು ಜಾಗಾ ಇರುತ್ತದೆ ಎಂದರೆ ಸಾಕ್ಷಿ ನಾನು ಅಷ್ಟಾಗಿ ಗಮನ ಹರಿಸಿಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ ಸ್ವತ್ತು " A" ಒಂದೇ ಆಸ್ತಿ ಇದ್ದು, ಅದರಲ್ಲಿ ಯಾವುದೇ ವಿಂಗಡಣೆ ಆಗಿರುವುದಿಲ್ಲ. ದಾವಾ ಸ್ವತ್ತು "A" ಯಲ್ಲಿ ರಾವೂರಿಗೆ ಹೋಗುವ ರಸ್ತೆ ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ಒಂದು ಹಿಸ್ಸಾ ಟಿಪ್ಪಣಿಯ ದೃಢಿಕೃತ ಪ್ರತಿ ತೋರಿಸಲಾಗಿ ಅದರಲ್ಲಿ 2 ಗುಂಟೆ ಖರಾಬು ಜಾಗಾವನ್ನು ರಾವೂರಿಗೆ ಹೋಗುವ ರಸ್ತೆ ಎಂದು ತೋರಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ**-4** ಎಂದು ಗುರುತಿಸಲಾಗಿರುತ್ತದೆ. ನಿಶಾನೆ ಡಿ-4 ರ ದಕ್ಷಿಣದಿಂದ ಉತ್ತರಕ್ಕೆ ಹೋಗುವ ರಸ್ತೆಯ ಬಲಭಾಗಕ್ಕೆ ಖಾಲಿ ಜಾಗಾ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಸಾಕ್ಷಿಗೆ ಒಂದು ಛಾವಚಿತ್ರವನ್ನು ತೋರಿಸಲಾಗಿ ಸದರಿ ಛಾವಚಿತ್ರದಲ್ಲಿ ಎನ್.ಆರ್.ಪುರದಿಂದ ಚಿಕ್ಕಮಗಳೂರಿಗೆ ಹೋಗುವ ರಸ್ತೆಯ ಬಲಭಾಗಕ್ಕೆ ರಾವೂರಿಗೆ ಹೋಗುವ ರಸ್ತೆ ಇದ್ದು, ಅಲ್ಲಿ ಖಾಲಿ ಜಾಗಾ ದಾವಾ ಆಸ್ತಿಯಲ್ಲಿ ಕಾಣುತ್ತದೆ ಎಂದರೆ ಸರಿ. ಸಾಕ್ಷಿ ಸದರಿ ಪೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ

22/2025 ರಲ್ಲಿ ನಿಶಾನೆ ಡಿ-**5** ಎಂದು ಗುರುತಿಸಲಾಗಿರುತ್ತದೆ. ಸದರಿ ರಾವೂರು ರಸ್ತೆಯಿಂದ ಮುಂದೆ ಹೋದರೆ ಅಂಗನವಾಡಿ ಕೇಂದ್ರ/ಕಟ್ಟಡ ಇರುತ್ತದೆ ಎಂದರೆ ಸರಿ. ಸಾಕ್ಷಿ ಸದರಿ ಅಂಗನವಾಡಿ ಕಟ್ಟಡದ ಭಾವಚಿತ್ರ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ-**6** ಎಂದು ಗುರುತಿಸಲಾಗಿರುತ್ತದೆ.

**5.** ಸದರಿ ಅಂಗನವಾಡಿ ಕೇಂದ್ರ/ಕಟ್ಟಡ 2006 ರಿಂದ ಇರುತ್ತದೆ ಎಂದರೆ ಸಾಕ್ಷಿ ತುಂಬಾ ವರ್ಷದಿಂದ ಇರುತ್ತದೆ ನೋಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನನ್ನ ಪ್ರಕಾರ ಸದರಿ ಅಂಗನವಾಡಿ ಕಟ್ಟಡ ನಮ್ಮ ಜಾಗಾದಲ್ಲಿ ಬರುತ್ತದೆ. ಸದರಿ ಅಂಗನವಾಡಿ ಕಟ್ಟಡ ದಾವಾ ಆಸ್ತಿಯ ಒಳಗಡೆ ಬರುತ್ತದೆ ಎಂಬ ಬಗ್ಗೆ ನನ್ನ ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಅದರ ಬಗ್ಗೆ ಪ್ರತ್ಯೇಕ ಕೇಸ್ ಹೂಡುತ್ತೇನೆ ಎಂದು ಉತ್ತರಿಸಿರುತ್ತಾರೆ. ಸದರಿ ಕಟ್ಟಡ 15-20 ವರ್ಷದಿಂದ ಇರುತ್ತದೆ ಎಂದರೆ ಸರಿ. ಅಂಗನವಾಡಿ ಕೇಂದ್ರ/ಕಟ್ಟಡಕ್ಕೆ ಹೊಂದಿಕೊಂಡಂತೆ ಈ ದಾವೆಯ ಪ್ರತಿವಾದಿ ಮತ್ತು ಉಳಿದ ದಾವೆಯ ಪ್ರತಿವಾದಿಯರ (OS No. 22, 23, 25, 27 ರಿಂದ 29 ಮತ್ತು 31/2025)ರ ಮನೆಗಳು ಇರುತ್ತವೆ ಎಂದರೆ ಸರಿ. ಸಾಕ್ಷಿಗೆ ಒಂದು ಪೋಟೋ ತೋರಿಸಲಾಗಿ ಅಂಗನವಾಡಿ ಕೇಂದ್ರ/ಕಟ್ಟಡಕ್ಕೆ ಹೊಂದಿಕೊಂಡು ಈ ದಾವೆಯ ಪ್ರತಿವಾದಿಯ ಮನೆ ಬರುತ್ತದೆ ಎಂದರೆ ಸರಿ. ಸಾಕ್ಷಿ ಸದರಿ ಪೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ-**7** ಎಂದು ಗುರುತಿಸಲಾಗಿರುತ್ತದೆ.

**6.** ಈ ದಾವೆಯ ಪ್ರತಿವಾದಿಯ ಮನೆ ಹಾಗೂ ಅಂಗನವಾಡಿ ಕಟ್ಟಡದ ಮುಂದುಗಡೆ ಒಂದು ದೊಡ್ಡ ಅರಳಿ ಮರ ಇರುತ್ತದೆ ಎಂದರೆ ಸರಿ. ಸಾಕ್ಷಿ ಸದರಿ ಅರಳಿ ಮರದ ಭಾವಚಿತ್ರ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ-**8** ಎಂದು ಗುರುತಿಸಲಾಗಿರುತ್ತದೆ. ಸದರಿ ಅರಳಿ ಮರದ ಬಳಿ ಪ್ರತಿ ವರ್ಷ ದಸರಾ ಸಂದರ್ಭದಲ್ಲಿ ಬನ್ನಿ ಕಡಿಯುವುದು ಮಾಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅರಳಿ ಮರ ಇರುವ ಕಾರಣ ಆ ರೀತಿ ಮಾಡುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ಬನ್ನಿ ಕಡಿಯವುದು ಸುಮಾರು 50-60 ವರ್ಷಗಳಿಂದ ಮಾಡುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿ ನನಗೆ ಬುದ್ಧಿ ಬಂದಾಗಿನಿಂದ ಮಾಡುತ್ತಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನರಸಿಂಹರಾಜ

ಪುರಕ್ಕೆ ಈ ಹಿಂದೆ ಯಡೇಹಳ್ಳಿ ಎಂದು ಕರೆಯುತ್ತಿದ್ದರು ಎಂದರೆ ಸರಿ. ನಾನು ದಾವಾ ಆಸ್ತಿಯ ದಕ್ಷಿಣಕೆ ರಸ್ತೆ ಎಂತ ತೋರಿಸಿದ್ದು ಅದನ್ನು ಈ ಹಿಂದೆ ಯಡೇಹಳ್ಳಿಯಿಂದ ಚಿಕ್ಕಮಗಳೂರಿಗೆ ಹೋಗುವ ರಸ್ತೆ ಎಂದು ಕರೆಯುತ್ತಿದ್ದರು ಎಂದರೆ ಸರಿ. ಸದರಿ ರಸ್ತೆಯನ್ನು ಹೆಬ್ಬೆ ರಸ್ತೆ ಎಂದು ಕರೆಯುತ್ತಿದ್ದರು ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸಿರುತ್ತಾರೆ.

**7.** ಸಾಕ್ಷಿಗೆ ಒಂದು ಭಾವಚಿತ್ರ ತೋರಿಸಲಾಗಿ ದಸರಾ ಸಂದರ್ಭದಲ್ಲಿ ಮಾಡುತ್ತಿದ್ದ ಪೂಜೆ ಇದ್ದು, ಸಾಕ್ಷಿಯು ಸದರಿ ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ-**9** ಎಂದು ಗುರುತಿಸಲಾಗಿರುತ್ತದೆ. ಎನ್.ಆರ್.ಪುರ - ಚಿಕ್ಕಮಗಳೂರು ರಸ್ತೆಯಿಂದ ದಕ್ಷಿಣದ ಉತ್ತರಕ್ಕೆ ಹೋಗುವ ರಾವೂರು ರಸ್ತೆ ಕಾಂಕ್ರೀಟ್ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ಕಾಂಕ್ರೀಟ್ ರಸ್ತೆ ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ರಸ್ತೆಯ ಬಲಭಾಗಕ್ಕೆ ಖಾಲಿ ಜಾಗ ಇದ್ದು, ಅದರ ಪೂರ್ವ ದಿಕ್ಕಿಗೆ ಯಾರ ಜಾಗಾ ಬರುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ. ಅದೇ ರೀತಿ ಸದರಿ ಅರಳಿ ಮರದ ಹತ್ತಿರ ಇರುವ ಖಾಲಿ ಜಾಗದ ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಯಾರ ಜಾಗಾ ಬರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ನಮ್ಮ ಆಸ್ತಿಯ ಯಾವ ದಿಕ್ಕಿಗೆ ಸುಮತಿ ಶಾಂತಣ್ಣ ಇವರ ಆಸ್ತಿ ಬರುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ. ನಮ್ಮ ಜಾಗದಲ್ಲಿ ಕಟ್ಟಿರುವ ಅಂಗನವಾಡಿ ಕಟ್ಟಡಕ್ಕೆ ವಿದ್ಯೂತ್ ಸಂಪರ್ಕ ಇದೆಯೋ ಇಲ್ಲವೋ ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯರು ಇದ್ದಾರೆ ಎಂದು ಹೇಳುವ ಮನೆಗಳಿಗೆ ವಿದ್ಯೂತ್ ಸಂಪರ್ಕ ಇರುತ್ತದೆ. ಸದರಿ ವಿದ್ಯೂತ್ ಸಂಪರ್ಕವನ್ನು ಯಾವಾಗ ಪಡೆದುಕೊಂಡಿರುತ್ತಾರೆ ಎಂಬ ಬಗ್ಗೆ ನಾನು ಮೆಸ್ಕಾಂ ಅಥವಾ ಕೆ.ಇ.ಬಿ. ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡಿರುವುದಿಲ್ಲ.

**8.** ದಾವಾ "B" ಆಸ್ತಿಯಲ್ಲಿರುವ ಮನೆ ಸುಮಾರು 70-80 ವರ್ಷದ ಮನೆ ಇರುತ್ತದೆ ಎಂದರೆ ಸಾಕ್ಷಿ 10-20 ವರ್ಷದ್ದು ಇರಬಹುದು ನಂತರ 10-12 ವರ್ಷ ತದನಂತರ 10 ವರ್ಷದ್ದು ಇರಬಹುದು ಎಂದು ಉತ್ತರಿಸಿರುತ್ತಾರೆ. ನಾನು ದಾವಾ "B" ಆಸ್ತಿಯ ವಿಸ್ತೀರ್ಣ ಮತ್ತು ಚೆಕ್ ಬಂಧಿಯನ್ನು ಸರ್ವೆ ದಾಖಲೆಯ ಆಧಾರದ ಮೇಲೆ ನೀಡಿರುತ್ತೇನೆ. ನಾನು ದಾವಾ "B" ಆಸ್ತಿಗೆ ಸಂಬಂಧ ಪಟ್ಟಂತೆ ಯಾವುದೇ ಸರ್ವೆ ದಾಖಲೆ

ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಸರ್ವೆ ಸ್ಕೆಚ್ ಕೊಟ್ಟಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಮೂಲ ಸರ್ವೆ ಟಿಪ್ಪಣಿ ಪುಸ್ತಕ ಸರ್ವೆ ನಂ. 112 ರಲ್ಲಿ 5 ಮನೆಗಳನ್ನು ತೋರಿಸಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸಿರುತ್ತಾರೆ. ನಿಶಾನೆ ಡಿ-1 ರಲ್ಲಿ ಕಲಂ ನಂ. 10 ರಲ್ಲಿ ನಕಾಶೆಯಲ್ಲಿ ಕಂಡ ಗಾಡಿ ದಾರಿ ಇರುತ್ತೇ, ರಾವೂರಿಗೆ ಹೋಗುತ್ತದೆ ಮತ್ತು ಮನೆಗಳು ಇವೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಸದರಿ ಭಾಗವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ-**1(**ಎ**)** ಎಂದು ಗುರುತಿಸಲಾಗಿರುತ್ತದೆ. ಸದರಿ ಸರ್ವೆ ನಂ. 112 ರಲ್ಲಿ 2 ಗುಂಟೆ ಖರಾಬು ಇದ್ದು ಅದು ರಾವೂರಿಗೆ ಹೋಗುವ ಕಾಂಕ್ರಿಟ್ ರಸ್ತೆ ಇರುತ್ತದೆ ಎಂದರೆ ಸರಿ. ಅದೇ ರೀತಿ ನಿಶಾನೆ ಡಿ-2 ರಲ್ಲಿ ಸಿರಿಯಲ್ ನಂ. 208 ರಲ್ಲಿ ಸರ್ಕಾರಿ ನಕಾಶೆಯಲ್ಲಿ ಕಂಡ ಗಾಡಿ ದಾರಿ ಇರುತ್ತೇ, ರಾವೂರಿಗೆ ಹೋಗುತ್ತದೆ ಮತ್ತು ಮನೆಗಳು ಇವೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಸದರಿ ಭಾಗವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ-**2(**ಎ**)** ಎಂದು ಗುರುತಿಸಲಾಗಿರುತ್ತದೆ. ನಿಶಾನೆ ಡಿ-3 ಮತ್ತು ನಿಶಾನೆ ಪಿ-7 ರಲ್ಲಿ ನಿಶಾನೆ ಡಿ-1 ಮತ್ತು ನಿಶಾನೆ ಡಿ-2 ರಲ್ಲಿ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ತೋರಿಸಿದ ಮನೆಗಳನ್ನು ರೀ-ಸರ್ವೆ ಟಿಪ್ಪಟಿ ಪುಸ್ತಕದಲ್ಲಿ ತೋರಿಸಿರುತ್ತಾರೆ ಮತ್ತು ಮೂಲ ಸರ್ವೆ ದಾಖಲೆಯಲ್ಲಿ ತೋರಿಸಿರುತ್ತಾರೆ ಎಂದರೆ ಸರಿ.

**9.** ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ-3 ರಲ್ಲಿ ತೋರಿಸಿದ ಮನೆಗಳು ಈಗಲೂ ಇರುತ್ತವೆ ಎಂದರೆ ಸಾಕ್ಷಿ ಮನೆಗಳು ಇರುತ್ತವೆ ಆದರೆ ಅವುಗಳೇ ಎಂದು ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸಾಕ್ಷಿಗೆ ಒಂದು ಗೂಗಲ್ ನ ಫೋಟೋ ತೋರಿಸಲಾಗಿ ಸಾಕ್ಷಿ ಸದರಿ ಫೋಟೋದಲ್ಲಿ ಎನ್.ಆರ್.ಪುರದಿಂದ ಚಿಕ್ಕಮಗಳೂರಿಗೆ ಹೋಗುವ ದಾರಿ ಅಂಗನವಾಡಿ ಕೇಂದ್ರ ಹಾಗೂ ಖಾಲಿ ಜಾಗವನ್ನು ನೋಡಿ ಗುರುತಿಸಿದ್ದು ಸದರಿ ಫೋಟೋವನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿನಿಶಾನೆ ಡಿ-**10** ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಗೆ ನಿಶಾನೆ ಡಿ-10 ರಲ್ಲಿ 2 ಕಾಂಕ್ರೀಟ್ ರಸ್ತೆ ತೋರಿಸಲಾಗಿ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ಕಾಂಕ್ರೀಟ್ ರಸ್ತೆಯ

ಅಕ್ಕ-ಪಕ್ಕ ಸಾರ್ವಜನಿಕರ ವಾಸದ ಮನೆಗಳು ಇದ್ದು, ಸದರಿ ಮನೆಗಳನ್ನು ಸಂಪರ್ಕಿಸುವ ಸಲುವಾಗಿ ಕಾಂಕ್ರೀಟ್ ರಸ್ತೆಯನ್ನು ಮಾಡಲಾಗಿರುತ್ತದೆ ಎಂದರೆ ಸರಿ.

**10.** ಸದರಿ ಮನೆಗಳು ನಾಗಲಾಪುರ ಗ್ರಾ.ಪಂ. ವ್ಯಾಪ್ತಿಗೆ ಬರುವ ಮನೆಗಳು ಇರುತ್ತವೆ ಎಂದರೆ ಸರಿ. ಸದರಿ ನಾಗಲಾಪುರ ಗ್ರಾ.ಪಂ. ವ್ಯಾಪ್ತಿಗೆ ಬರುವ ಮನೆಗಳನ್ನು ಸುಗಪ್ಪನ ಮಠ ಎಂದು ಕರೆಯುತ್ತಾರೆ ಎಂದರೆ ಸರಿ. ಸದರಿ 2 ಕಾಂಕ್ರೀಟ್ ರಸ್ತೆಗಳು ನಮ್ಮ ಆಸ್ತಿಯ ವ್ಯಾಪ್ತಿಯಲ್ಲಿ ಬರುತ್ತವೆ. ಸದರಿ ಕಾಂಕ್ರೀಟ್ ರಸ್ತೆಯನ್ನು ಗ್ರಾಮ ಪಂಚಾಯತಿಯವರು ಯಾವಾಗ ನಿರ್ಮಾಣ ಮಾಡಿರುತ್ತಾರೆ ಎಂದು ನಾನು ವಿಚಾರಿಸಿರುವುದಿಲ್ಲ. ಸಾಕ್ಷಿಗೆ ಒಂದು ನಾಗಲಾಪುರ ಗ್ರಾಮ ಪಂಚಾಯತಿಯವರು ಮಾಹಿತಿ ಹಕ್ಕಿನಡಿ ನೀಡಿದ ಕಾಮಗಾರಿ ದೃಢಿಕರಣ ವರದಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಒಪ್ಪಿಕೊಂಡಿದ್ದು, ಅದನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ-**11** ಎಂದು ಗುರುತಿಸಲಾಗಿರುತ್ತದೆ.

**11.** ನಿಶಾನೆ ಪಿ-10 ಹದ್ದುಬಸ್ತು ಅಳತೆ ಸ್ಕೆಚ್ ಮಾಡುವ ಕಾಲಕ್ಕೆ ಯಾರಿಗೂ ನೋಟಿಸ್ ಕೊಟ್ಟಿರುವುದಿಲ್ಲ. ಸರ್ವೆಯವರು ನಿಶಾನೆ ಪಿ-10 ಅನ್ನು ಕಚೇರಿಯಲ್ಲಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆಯವರು ಯಾವ ದಿನಾಂಕದಂದು ಸರ್ವೆ ಮಾಡಲು ಬಂದಿರುತ್ತಾರೆ ಗೊತ್ತಿರುವುದಿಲ್ಲ ಆದರೆ 2024 ರಲ್ಲಿ ಬಂದಿರುತ್ತಾರೆ. ನಿಶಾನೆ ಪಿ-10 ರಲ್ಲಿ ಅಂಗನವಾಡಿ ಕೇಂದ್ರ ಮತ್ತು ಬಾಕ್ಸ್ ಚರಂಡಿ ಮಾಡಿರುವ ಬಗ್ಗೆ ನಮೂದು ಇರುವುದಿಲ್ಲ. ಈ ದಾವೆಯ ಪ್ರತಿವಾದಿ, ಅವರ ಗಂಡ ಮತ್ತು ವಯಸ್ಸಿನ ಬಗ್ಗೆ ಸೂಗಪ್ಪನ ಮಠದ ನಿವಾಸಿಗಳ ಬಳಿ ಕೇಳಿರುತ್ತೇನೆ ಆದರೆ ಅವರ ಹೆಸರು ನೆನಪಿರುವುದಿಲ್ಲ. ಈ ದಾವೆಯ ಪ್ರತಿವಾದಿ ಯಾರು ಎಂದು ನ್ಯಾಯಾಲಯದ ಮುಂದಿರುವ ಪ್ರತಿವಾದಿಯನ್ನು ಗುರುತಿಸುತ್ತಿರಾ ಎಂದರೆ ಸಾಕ್ಷಿ ಪ್ರತಿವಾದಿಯನ್ನು ನೋಡಿ ಗುರುತಿಸಿರುತ್ತಾರೆ. ದಾವೆ ಹೂಡುವ ಕಾಲಕ್ಕೆ ನಾನು ಅವರ ವಯಸ್ಸನ್ನು 45 ವರ್ಷ ಎಂತ ತೋರಿಸಿದ್ದು ಆದರೆ ಅವರಿಗೆ 73 ವರ್ಷ ವಯಸ್ಸು ಆಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

**12.** ಸಾಕ್ಷಿಗೆ ಒಂದು ತಹಸೀಲ್ದಾರ ಕಚೇರಿಯಿಂದ ಪ್ರತಿವಾದಿಯ ಹೆಸರಿಗೆ ದಿಃ 01.03.1987 ರಂದು ನೀಡಿದ ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು

ಉತ್ತರಿಸಿರುತ್ತಾರೆ. ಪ್ರತಿವಾದಿ ತಮ್ಮ ಮನೆಯಲ್ಲಿ ವಿದ್ಯುತ ಸಂಪರ್ಕ ಪಡೆದು ಅಲ್ಲಿಯೇ ವಾಸ ಇರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 2002 ರ ಮತದಾರರ ಪಟ್ಟಿಯಲ್ಲಿ ಈ ಪ್ರತಿವಾದಿಯ ಹೆಸರು ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಶಾನೆ ಪಿ-10 ರಲ್ಲಿ ಇಂತಿಂಥ ವ್ಯಕ್ತಿಗಳು ಇಂತಿಷ್ಟು ವಿಸ್ತೀರ್ಣವನ್ನು ಒತ್ತುವರಿ ಮಾಡಿರುತ್ತಾರೆ ಎಂದು ವರದಿ ಕೊಟ್ಟಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಇಂತಿಷ್ಟು ಒತ್ತುವರಿ ಮಾಡಿರುತ್ತಾರೆ ಎಂದು ನನ್ನ ಹೇಳಿಕೆಯ ಮೇರೆಗೆ ವಾದ ಪತ್ರದಲ್ಲಿ ತೋರಿಸಿರುತ್ತೇನೆ. ನಿಶಾನೆ ಪಿ-10 ತಯಾರಾದ ನಂತರ ನಾನು ವೈಯಕ್ತಿಕವಾಗಿ ಪ್ರತಿವಾದಿಯರ ಮನೆಗಳನ್ನು ಅಳತೆ ಮಾಡಿರುವುದಿಲ್ಲ ಆದರೆ ಮನೆಯ ಆಧಾರದ ಮೇಲೆ ವಿಸ್ತೀರ್ಣ ತೋರಿಸಿರುತ್ತೇನೆ.

**13.** ಪ್ರತಿವಾದಿಯ ಗಂಡನ ಹೆಸರು ಭಾಷಾ ಇರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ ದಾವಾ "A" ಸ್ವತಿನಲ್ಲಿ 2015 ರಲ್ಲಿ ಅತಿಕ್ರಮ ಪ್ರವೇಶ ಮಾಡಿ ಮನೆ ಕಟ್ಟಿರುತ್ತಾರೆ. 2015 ರಲ್ಲಿ ಈ ರೀತಿ ಪ್ರತಿವಾದಿ ಅತಿಕ್ರಮ ಪ್ರವೇಶ ಮಾಡಿ ಮನೆ ಕಟ್ಟಿರುತ್ತಾರೆ ಎಂದು ನಾನು ವಾದ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ಒಂದು ಮೆಸ್ಕಾಂ ಅಧಿಕಾರಿಗಳು ನೀಡಿದ ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯ ಪ್ರಕಾರ 1991 ರಲ್ಲಿ ಮೂಲ ದಾವೆ ಸಂಖ್ಯೆಃ 22/2025 ರ ಪ್ರತಿವಾದಿಯ ಅತ್ತೆ ತಮ್ಮ ಮನೆಗೆ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದು, ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ-**12** ಎಂದು ಗುರುತಿಸಲಾಗಿರುತ್ತದೆ.

**14.** ಮೂಲ ದಾವೆ ಸಂಖ್ಯೆಃ 31/2025 ರ ಪ್ರತಿವಾದಿಯ ಗಂಡನ ಹೆಸರು ನನಗೆ ಗೊತ್ತಿರುವುದಿಲ್ಲ. ಆದರೆ ದಾವೆ ಹೂಡುವ ಕಾಲಕ್ಕೆ ಪ್ರತಿವಾದಿಯನ್ನು ಅವರ ಗಂಡನ ಹೆಸರ ಬಗ್ಗೆ ಕೇಳಿರುತ್ತೇನೆ. ಸದರಿ ನಜ್ಮಾ ಇವರ ಮನೆಗೆ ವಿದ್ಯುತ್ ಸಂಪರ್ಕ ಇರುತ್ತದೆ. ಸಾಕ್ಷಿಗೆ ಒಂದು ಮೆಸ್ಕಾಂ ಅಧಿಕಾರಿಗಳು ನೀಡಿದ ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯ ಪ್ರಕಾರ 2014 ರಲ್ಲಿ ಪ್ರತಿವಾದಿಯ ಮನೆಗೆ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದು, ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ-**13** ಎಂದು ಗುರುತಿಸಲಾಗಿರುತ್ತದೆ. ಮೂಲ ದಾವೆ ಸಂಖ್ಯೆಃ 22/2025 ರ ಪ್ರತಿವಾದಿ ಮತ್ತು ನಜ್ಮಾ

ಇವರು ಸೈಯದ್ ಇಕ್ಬಾಲ್ ಮತ್ತು ಸೈಯದ್ ಮುನಾವರ್ ಇವರ ಹೆಂಡತಿಯರು ಇರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಪ್ರತಿವಾದಿ ಮೂಲ ದಾವೆ ಸಂಖ್ಯೆಃ 29/2025 ರವರ ಮಕ್ಕಳು ಮೂಲ ದಾವೆ ಸಂಖ್ಯೆಃ 23/2025 ಹಾಗೂ 28/2025 ರ ಪ್ರತಿವಾದಿಯರು ಇರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಸಾಕ್ಷಿಗೆ ಒಂದು ಮೆಸ್ಕಾಂ ಅಧಿಕಾರಿಗಳು ನೀಡಿದ ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯ ಪ್ರಕಾರ 2008 ರಲ್ಲಿ ಪ್ರತಿವಾದಿಯ ಮನೆಗೆ ವಿದ್ಯೂತ್ ಸಂಪರ್ಕ ಪಡೆದುಕೊಂಡಿದ್ದು, ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಡಿ**-1** ಎಂದು ಈಗಾಗಲೇ ಮೂಲ ದಾವೆ ಸಂಖ್ಯೆಃ 24/2025 ರಲ್ಲಿ ಗುರುತಿಸಲಾಗಿರುತ್ತದೆ. ಈ ದಾವೆ ಹೂಡುವ ಕಾಲಕ್ಕೆ ಪ್ರತಿವಾದಿಗೆ 73 ವರ್ಷ ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಮೂಲ ದಾವೆ ಸಂಖ್ಯೆಃ 29/2025 ರಲ್ಲಿ ಪ್ರತಿವಾದಿ ಕಟ್ಟಿರುವ ಮನೆಯನ್ನು ನೋಡಿರುತ್ತೇನೆ ಆದರೆ ಎಷ್ಟು ವರ್ಷ ಹಳೇದು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಮನೆಯಲ್ಲಿ ದಸ್ತಗಿರ್ ಮತ್ತು ಶ್ರೀಮತಿ ಅಕ್ತರ್ ಇವರು ಸುಮಾರು 90-100 ವರ್ಷಗಳಿಂದ ಮನೆ ಕಟ್ಟಿಕೊಂಡು ಅದೇ ಸ್ಥಳದಲ್ಲಿ ವಾಸ ಇರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

**15.** ಈ ದಾವೆಯ ಪ್ರತಿವಾದಿಯ ಪರಿಚಯ ಇರುತ್ತದೆ. ಈ ದಾವೆ ಹೂಡುವ ಕಾಲಕ್ಕೆ ಅವರಿಗೆ 73 ವರ್ಷ ವಯಸ್ಸು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಮೆಸ್ಕಾಂ ಅಧಿಕಾರಿಗಳು ನೀಡಿದ ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯ ಪ್ರಕಾರ 1973 ರಲ್ಲಿ ಈ ದಾವೆಯ ಪ್ರತಿವಾದಿಯ ಮನೆಗೆ ವಿದ್ಯೂತ್ ಸಂಪರ್ಕ ಪಡೆದುಕೊಂಡಿದ್ದು, ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ**-14** ಎಂದು ಗುರುತಿಸಲಾಗಿರುತ್ತದೆ. ಸದರಿಯವರು ಕಟ್ಟಿಕೊಂಡ ಮನೆಯಲ್ಲಿ ಈಗಲೂ ಸಹ ವಾಸ ಇರುತ್ತಾರೆ ಎಂದರೆ ಸರಿ. ಸದರಿ ಮನೆ ಸುಮಾರು 70-80 ವರ್ಷ ಹಳೆಯದಾದ ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನನಗೆ ದಾವೆ ಹೂಡುವ ಕಾಲಕ್ಕೆ ಪ್ರತಿವಾದಿ ಎಷ್ಟು ವರ್ಷಗಳಿಂದ ವಾಸ ಇರುತ್ತಾರೆ ಮತ್ತು ಅವರ ವಯಸ್ಸಿನ ಬಗ್ಗೆ ಗೊತ್ತಿದ್ದರು ಸಹ ನಾನು ಸುಳ್ಳು ಮಾಹಿತಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**16.** ನಾನು ಈ ದಾವೆ ಹೂಡುವ ಕಾಲಕ್ಕೆ ಎಲ್ಲಾ ದಾವೆಯ ಪ್ರತಿವಾದಿಯರು ಎಷ್ಟು ವರ್ಷಗಳಿಂದ ಮನೆ ಕಟ್ಟಿಕೊಂಡು ಇರುತ್ತಾರೆ, ಮತದಾರರ ಪಟ್ಟಿಯಲ್ಲಿ ಹೆಸರಿರುತ್ತದೆ ಮತ್ತು ಯಾವಾಗ ವಿದ್ಯುತ್ ಸಂಪರ್ಕ ಪಡೆದುಕೊಂಡಿರುತ್ತಾರೆ ಎಂಬ ಬಗ್ಗೆ ನಾನು ಯಾವುದೇ ದಾಖಲೆ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿ. ನಮ್ಮ ಕುಟುಂಬದ ಸದಸ್ಯರ ಮತದಾರರ ಪಟ್ಟಿ ವಾರ್ಡ್ ನಂ. 5 ಎನ್.ಆರ್.ಪುರದಲ್ಲಿ ಇರುತ್ತದೆ. ನಮ್ಮ ಕುಟುಂಬದವರು ಯಾವ ಮತಗಟ್ಟೆಯಲ್ಲಿ ಮತ ಚಲಾಯಿಸುತ್ತೇವೆ ಎಂಬುದರ ಬಗ್ಗೆ ದಾಖಲೆ ಇರುತ್ತದೆ ಎಂದರೆ ಸರಿ.

**17.** ದಾವಾ ಆಸ್ತಿಯ ಉತ್ತರಕ್ಕೆ ಇರುವ ಪೌಲಸ್ ಇವರ ಆಸ್ತಿಯ ಸರ್ವೆ ನಂ. 101 ಇರುತ್ತದೆ. ದಾವಾ ಆಸ್ತಿಯ ಉತ್ತರಕ್ಕೆ ಪೌಲಸ್ ಆಸ್ತಿಯಲ್ಲಿ ಸಾರ್ವಜನಿಕ ಮನೆಗಳು ಇರುತ್ತವೆ. ಸದರಿ ಜಾಗಾದಲ್ಲಿ ನಾನು ನೋಡಿದ ಹಾಗೇ ಸುವಾರು 10-15 ವರ್ಷಗಳಿಂದ ಸಾರ್ವಜನಿಕ ಮನೆಗಳು ಇರುತ್ತವೆ. ದಾವಾ ಆಸ್ತಿಯ ಪೂರ್ವಕ್ಕೆ ಇರುವ ಸುಮತಿ ಶಾಂತಣ್ಣ ಇವರ ಜಮೀನು ಸರ್ವೆ ನಂ. 111 ಇರುತ್ತದೆ. ಸದರಿ ಆಸ್ತಿಯಲ್ಲಿ ಬಾಳೆ ಇರುತ್ತದೆ. ನನಗೆ ದಾವೆ ಹಾಕುವ ಕಾಲಕ್ಕೆ ದಾವಾ "A" ಸ್ವತ್ತಿನ ಚೆಕ್ಕು ಬಂಧಿಯಲ್ಲಿ ತೋರಿಸಿರುವ ಆಸ್ತಿಗಳನ್ನು ಯಾರೂ ಸಾಗುವಳಿ ಮಾಡುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. ರಾವೂರಿಗೆ ಹೋಗುವ ರಸ್ತೆಯ ಎಡಭಾಗಕ್ಕೆ ಸುಮತಿ ಶಾಂತಣ್ಣ ಇವರ ಜಮೀನು ಬರುತ್ತದೆ ಎಂದರೆ ಸರಿ.

**18.** ಸಾಕ್ಷಿಗೆ ಒಂದು ಪೊಟೋ ತೋರಿಸಲಾಗಿ ಸದರಿ ಪೊಟೋದಲ್ಲಿ ಸುಮತಿ ಶಾಂತಣ್ಣ ಇವರ ಜಾಗಾವನ್ನು ತೋರಿಸಿದ್ದು ಸಾಕ್ಷಿ ಹೌದು ಎಂದು ಒಪ್ಪಿಕೊಂಡಿದ್ದು, ಸದರಿ ಪೋಟೋವನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ**-15** ಎಂದು ಗುರುತಿಸಲಾಗಿರುತ್ತದೆ. ಸುಮತಿ ಶಾಂತಣ್ಣ ಇವರ ಜಮೀನಿನ ಭಾಗವನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ**-15(**ಎ**)** ಎಂದು ಗುರುತಿಸಲಾಗಿರುತ್ತದೆ. ಸದರಿ ಸುಮತಿ ಶಾಂತಣ್ಣನವರು ತಮ್ಮ ಜಮೀನಿನಲ್ಲಿ ಬಾಳೆ ಹಾಕುವುದಕ್ಕಿಂತ ಪೂರ್ವದಲ್ಲಿ ಖಾಲಿ ಜಾಗಾ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ ಇನ್ನೊಂದು ಪೋಟೋ ತೋರಿಸಲಾಗಿ ಸದರಿ ಪೋಟೋದಲ್ಲಿ ಸುಮತಿ ಶಾಂತಣ್ಣ ಇವರ ಜಮೀನನ್ನು ತೋರಿಸಿದ್ದು ಸಾಕ್ಷಿ ಸದರಿ ಪೋಟೋವನ್ನು ನೋಡಿ ಗುರುತಿಸಿದ್ದು

ಅದನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ-**16** ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಲಾಗಿ ಸಾಕ್ಷಿಯು ಸದರಿ ಭಾವಚಿತ್ರದಲ್ಲಿ ಸುಮತಿ ಶಾಂತಣ್ಣ ಇವರ ಜಮೀನನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ-**17** ಎಂದು ಗುರುತಿಸಲಾಗಿರುತ್ತದೆ.

**19.** ನಿಶಾನೆ ಡಿ-17 ರಲ್ಲಿ ಮನೆಗಳು ಕಾಣಿಸುತ್ತವೆ ಎಂದರೆ ಸರಿ. ಸಾಕ್ಷಿ ಸದರಿ ಮನೆಗಳನ್ನು ನೋಡಿ ಗುರುತಿಸಿದ್ದು, ಸದರಿ ಭಾಗವನ್ನು ಈಗಾಗಲೇ ಮೂಲ ದಾವೆ ಸಂಖ್ಯೆಃ 22/2025 ರಲ್ಲಿ ನಿಶಾನೆ ಡಿ-**17(ಎ)** ಎಂದು ಗುರುತಿಸಲಾಗಿರುತ್ತದೆ. ದಾವಾ "B" ಸ್ವತ್ತಿನ ಪಶ್ಚಿಮ ದಿಕ್ಕಿಗೆ ತೋರಿಸಿರುವ ರಸ್ತೆ ಎನ್.ಆರ್.ಪುರ - ಚಿಕ್ಕಮಗಳೂರು ರಸ್ತೆ ಇರುತ್ತದೆ. ಸುಗ್ಗಪ್ಪನ ಮಠ ನಾಗಲಾಪುರ ಗ್ರಾಮ ಪಂಚಾಯತಿಗಿಂತ ಪೂರ್ವದಲ್ಲಿ ಮೆಣಸೂರು ಮಂಡಲ ಪಂಚಾಯತಿ ವ್ಯಾಪ್ತಿಗೆ ಬರುತ್ತಿತ್ತು ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಮ್ಮ ಕುಟುಂಬಕ್ಕೆ ಸೇರಿದ ಯಾವುದೇ ಮನೆಯಾಗಲೀ ಮೆಣಸೂರು ಮಂಡಲ ಪಂಚಾಯತ್ ಹಾಗೂ ನಾಗಲಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇರಲಿಲ್ಲ. ನಿಶಾನೆ ಡಿ-4 ರಲ್ಲಿ 3 ಗುಂಟೆ ಮನೆ ಮತ್ತು 2 ಗುಂಟೆ ರಸ್ತೆ ಖರಾಬು ಬಗ್ಗೆ ನಮೂದಿಸಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸಿರುತ್ತಾರೆ. ಪ್ರತಿವಾದಿಗಳು ಸುಮಾರು 80-90 ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸ ಇರುವ ವಿಚಾರ ನಮ್ಮ ತಾತ, ತಂದೆ ಹಾಗೂ ನನಗೆ ಗೊತ್ತಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ಪ್ರತಿವಾದಿಗಳು ಮನೆ ಕಟ್ಟಿಕೊಂಡು ಇರುವ ಬಗ್ಗೆ ಸಾರ್ವಜನಿಕ ದಾಖಲೆಗಳಲ್ಲಿ ನಮೂದು ಇರುತ್ತದೆ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಗಳು ಮನೆ ಕಟ್ಟಿಕೊಂಡು ವಾಸ ಇರುವ ವಿಚಾರ ಗೊತ್ತಿದ್ದರು ಸಹ ನಾನು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**20.** ನಮ್ಮ ತಾತ ಹಾಗೂ ತಂದೆಗೆ ಪ್ರತಿವಾದಿಗಳು ಮನೆ ಕಟ್ಟಿಕೊಂಡಿರುವ ವಿಚಾರ ಗೊತ್ತಿದ್ದು, ಅವರು ಸಕಾಲದಲ್ಲಿ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮನೆ ಕಟ್ಟಿಕೊಂಡ ವಿಚಾರ ನಮ್ಮ ತಾತ, ತಂದೆ ಹಾಗೂ ನನಗೂ ಗೊತ್ತಿದ್ದರು ಸಹ ನಾನು ಈ ದಾವೆಯಲ್ಲಿ ಕೇಳಿದಂತಹ ಪರಿಹಾರ ಪಡೆಯಲು

ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-10 ಅನ್ನು ನಾವು ಮತ್ತು ಸರ್ವೆಯರು ಸೇರಿಕೊಂಡು ಪ್ರತಿವಾದಿಯರಿಗೆ ಯಾವುದೇ ನೋಟಿಸು ನೀಡದೇ ಉತಾರೆ/ಸೃಷ್ಟಿ ಮಾಡಿದ ದಾಖಲೆ ಇರುತ್ತದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ ಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿ ಃ